\- - ಅಸಲು ದಾವೆ ಸಂ: **05/2022** ಪಿ .ಡಬ್ಲು **-1**

**ದಿ: 07-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು: ಶ್ರೀ ವಿ.ಎಮ್.ಎಮ್. ವಕೀಲರಿಂದ: -**

1. ನಾವು ಖರೀದಿ ಮಾಡುವ ಕಾಲಕ್ಕೆ ದಾವಾ ಹೊಲದ ಪಹಣಿ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಕೋರ್ಟ್‌ನಲ್ಲಿ ಡಿಕ್ರಿಯಾಗುವ ಕಾಲಕ್ಕೆ ಪಹಣಿ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಸರ್ವೆ ಮಾಡಿಸುವ ಕಾಲಕ್ಕೆ ಯಾರು ಯಾರು ಒತ್ತುವರಿ ಮಾಡಿದ್ದಾರೆ ಎಂದರೆ ಸಾಕ್ಷಿಯು

ಸರ್ವೆ ನಲ್ಲಿ ಬರೆಸಿದ್ದಾರೆ ಎಂದರೆ ಸಾಕ್ಷಿಯು ಸರ್ವೆಯರಿಗೆ ಗೊತ್ತು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೀವು ಹಾಜರುಪಡಿಸಿರುವ ಸರ್ವೆ ದಾಖಲೆ ನಿ ಪಿ 14 ಮತ್ತು 15 ರಲ್ಲಿ ಯಾರು ಎಷ್ಟು ಜಮೀನು ಒತ್ತುವರಿ ಮಾಡಿದ್ದಾರೆ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ಈ ರೀತಿ ಯಾರು ಎಷ್ಟು ಜಮೀನು ಒತ್ತುವರಿ ಮಾಡಿದ್ದಾರೆ ಎಂದು ಬರೆದಿಲ್ಲ ಆದರೂ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿದ ದಾಖಲೆ ಪ್ರಕಾರ ನೀವು ಕೇವಲ 0-36 ಗುಂಟೆ ಜಮೀನಿನ ಕಬ್ಜಾದಲ್ಲಿ ಇದ್ದೀರಾ 02 ಎಕರೆ 18 ಗುಂಟೆ ಜಮೀನಿನ ಕಬ್ಜಾದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿ ಪಿ 14 ಮತ್ತು 15 ಸರ್ವೆ ದಾಖಲಾತಿಯಲ್ಲಿ ನೀವು 02 ಎಕರೆ 18 ಗುಂಟೆ ಜಮೀನಿನ ಕಬ್ಜಾದಲ್ಲಿ ಇದ್ದೀರಾ ಎಂದು ಎಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ.

2. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ 1963-64 ರಿಂದ 1982-83 ನೇ ಸಾಲಿನ ಪಹಣಿ ಪತ್ರಿಕೆಯನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ನೋಡಿದ್ದೇನೆ ಎನ್ನುತ್ತಾರೆ. ಸದರಿ ಪಹಣಿಗಳನ್ನು ನೀವು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1963-64 ರಿಂದ 1982-83 ನೇ ಸಾಲಿನ ಪಹಣಿ ಪತ್ರಿಕೆಯಲ್ಲಿ ನಿಮ್ಮ ಹೆಸರಿಗೆ 01 ಎಕರೆ 09 ಗುಂಟೆ ಮಾತ್ರ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಖರೀದಿ ಪತ್ರ ಮತ್ತು ಕೋರ್ಟ್ ಡಿಕ್ರಿ ಪ್ರಕಾರ 02 ಎಕರೆ 18 ಗುಂಟೆ ಕ್ಷೇತ್ರದಲ್ಲಿ ನೀವು ಕಬ್ಜಾದಲ್ಲಿ ಇಲ್ಲ ಆ ಕಾರಣಕ್ಕೆ ನೀವು ಹಾಜರುಪಡಿಸಿಲ್ಲ ಮತ್ತು ನೀವು ಆ ಪ್ರಕಾರ ಕಬ್ಜಾದಲ್ಲಿ ಇಲ್ಲ ಎಂದರೆ ಸರಿಯಲ್ಲ. 1983ರ ನಂತರ ಪಹಣಿಗಳಲ್ಲಿ ಕಾನೂನು ಬಾಹಿರವಾಗಿ 02 ಎಕರೆ 18 ಗುಂಟೆ ಇದೆ ಎಂದು ನಮೂದು ಮಾಡಿಸಿಕೊಂಡಿದ್ದೀರಾ ಎಂದರೆ ಸರಿಯಲ್ಲ. ನಿಮಗೆ ಇರುವ 01 ಎಕರೆ 09 ಗುಂಟೆ ಜಮೀನು ಹೊರತುಪಡಿಸಿ ಇನ್ನೂ ಹೆಚ್ಚಿನ 01 ಎಕರೆ 09 ಗುಂಟೆ ಜಮೀನು ಸೇರಿಸಲು ಯಾವುದೇ

ಆಧಾರಗಳು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಜಮೀನು ಒತ್ತುವರಿ ಮಾಡಿದ್ದಾರೆ ಎಂದು ಯಾವುದೇ ದಾಖಲಾತಿಗಳು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. 1981 ರಲ್ಲಿ ಸ ನಂ 126/1 ರಲ್ಲಿ ನೀವು ನಿಮ್ಮ ಹೆಸರಿನಲ್ಲಿ 01 ಎಕರೆ 09 ಗುಂಟೆ ಜಮೀನು ಇದ್ದು ನೀವು ಕೋರ್ಟ್ ಡಿಕ್ರಿ ಪ್ರಕಾರ 02 ಎಕರೆ 18 ಗುಂಟೆ ಜಮೀನು ಮಾಡಿಸಿಕೊಂಡಿದ್ದೀರಿ ಎಂದು ವರದಿಯನ್ನು ಕೊಡದೆ ವಾಪಸ್ಸು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ಕಬ್ಜಾ ಮತ್ತು ಪಹಣಿ ಪತ್ರಿಕೆಯಲ್ಲಿ ವ್ಯತ್ಯಾಸ ಇದೆ ಎಂದು ಅವರು ವರದಿಯನ್ನು ವಾಪಸ್ಸು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪಕ್ಕದ ಹೊಲದ ಪ್ರತಿವಾದಿಯರ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದಿರಾ ಎಂದರೆ ಸರಿಯಲ್ಲ. ದಾವಾದ ಪತ್ರದೊಂದಿಗೆ ಪ್ರತಿವಾದಿಯರು ಒತ್ತುವರಿ ಮಾಡಿದ್ದಾರೆಂದು ಹಾತ್ ನಕಾಶೆ ಕೊಟ್ಟಿರುವುದಿಲ್ಲ. ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ಪ್ರತಿವಾದಿ ನಂ 4 ರಿಂದ 7 ರವರು ಸತ್ತಿದ್ದಾರೆ ನೀವು ಸತ್ತಿರುವವರ ವಿರುದ್ದ ಸುಳ್ಳು ದಾವೆ ಮಾಡಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.
(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ